**ಕರ್ನಾಟಕ ಸರ್ಕಾರ**

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/425/ಗ್ರೂಪ್-ಡಿ/2017-18/ನೇ.ವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 14.03.2018.

## ಸುತ್ತೋಲೆ

ವಿಷಯ: ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಲಿ ಇರುವ ಗ್ರೂಪ್-ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

* * * * *

ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ನಿರ್ದೇಶನದನ್ವಯ ಗ್ರೂಪ್-ಡಿ ನೌಕರರ ಕೊರತೆ ಇರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅನ್‌ಸ್ಕಿಲ್ಡ್/ಅರೆಕಾಲಿಕ ನೌಕರರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲಾಗುತ್ತಿತ್ತು.

ಆದರೆ, ಸರ್ಕಾರದ ಆದೇಶ ಸಂಖ್ಯೆ: ಆಇ 3 ಟಿಎಫ್‌ಪಿ 2017, ದಿನಾಂಕ:07-07-2017 ರಲ್ಲಿ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 55 (2) (ಬಿ) ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಇನ್ನು ಮುಂದೆ ಈ ಅವಕಾಶದಡಿ ಯಾವುದೇ ಅಂಶಕಾಲಿಕ ಅಕುಶಲ/ಅನಿಪುಣ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂಧಿಸಿದೆ. ಕಛೇರಿ ಸ್ವಚ್ಛತೆ, ಕಛೇರಿ ಕಾವಲು, ಕೈತೋಟ ನಿರ್ವಹಣೆ ಮುಂತಾದ ಕೆಲಸಗಳನ್ನು "ಸೇವಾ ಗುತ್ತಿಗೆ" ನೀಡುವ ಮೂಲಕ ನಿರ್ವಹಿಸಲು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು '051-ಸಾಮಾನ್ಯ ವೆಚ್ಚಗಳು'ರಡಿಯಲ್ಲಿ ಭರಿಸಲು ತಿಳಿಸುತ್ತಾ, ಈ ನಿಯಮದಡಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಾಗೂ ಆದೇಶ ಸಂಖ್ಯೆ: ಆಇ 5 ಟಿಎಫ್‌ಪಿ 2012, ದಿನಾಂಕ:25.06.2012 ರನ್ವಯ ಮಾಸಿಕ ಸಂಚಿತ ಸಂಭಾವನೆ ಪಡೆಯುತ್ತಿರುವ ಎಲ್ಲಾ ಅರೆಕಾಲಿಕ ಅಕುಶಲ ಕೆಲಸದಾಳುಗಳ ಸೇವೆಯನ್ನು ಅವರುಗಳ ನೇಮಕಾತಿ ಅವಧಿ ಪೂರೈಸಿದ ತಕ್ಷಣ ಬರಖಾಸ್ತು/ಮುಕ್ತಾಯ ಮಾಡತಕ್ಕದ್ದು ಎಂಬುದಾಗಿ ಆದೇಶಿಸಲಾಗಿದೆ.

ಕಾಲೇಜುಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಅಧಿಕಗೊಳ್ಳುತ್ತಿರುವ ಪ್ರಯುಕ್ತ ಕಾರ್ಯಭಾರದ ಒತ್ತಡ ಹೆಚ್ಚಾಗುತ್ತಿದೆ. ಕಾಲೇಜುಗಳಲ್ಲಿನ ನೈರ್ಮಲ್ಯ, ಆವರಣ ಸ್ವಚ್ಛತೆ, ಕಟ್ಟಡ/ಕೊಠಡಿಗಳ ಸ್ವಚ್ಛತೆ, ಪ್ರಯೋಗಾಲಯ ಕಾರ್ಯ, ಗ್ರಂಥಾಲಯ ಕಾರ್ಯ, ಪರೀಕ್ಷಾ ಕಾರ್ಯ ಮುಂತಾದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹಾಗೂ ಕಾಲೇಜುಗಳಲ್ಲಿ ಬೆಲೆ ಬಾಳುವ ಕಂಪ್ಯೂಟರ್‌ಗಳು, ಪ್ರೊಜೆಕ್ಟರ್‌ಗಳು ಮತ್ತು ಪರಿಕರಗಳು, ಪ್ರಯೋಗಾಲಯ ಉಪಕರಣಗಳು, ಗ್ರಂಥಾಲಯ ಪುಸ್ತಕಗಳು ಇತ್ಯಾದಿ ಚರ-ಸ್ಥಿರಾಸ್ತಿಗಳನ್ನು ಕಾಪಾಡಲು ರಾತ್ರಿ ಕಾವಲುಗಾರರಾಗಿ ಕಾರ್ಯನಿರ್ವಹಿಸಲು ಗ್ರೂಪ್-'ಡಿ' ನೌಕರರ ಅವಶ್ಯಕತೆಯನ್ನು ಗಮನಿಸಲಾಗಿದೆ.

ಆದ್ದರಿಂದ, ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಲಿ ಇರುವ ಗ್ರೂಪ್-ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲು ಆಯಾ ಕಾಲೇಜಿನ ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿದೆ. ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಬಳಸಿಕೊಳ್ಳುವಾಗ ಈಗಾಗಲೇ ಆಯಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನ್‌ಸ್ಕಿಲ್ಡ್/ಅರೆಕಾಲಿಕ ನೌಕರರನ್ನು ಆದ್ಯತೆ ಮೇರೆಗೆ ಪರಿಗಣಿಸುವುದು.

**ಕಾಲೇಜು ಶಿಕ್ಷಣ ಆಯುಕ್ತರು.**

**ಪ್ರತಿಯನ್ನು:**

1) ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ.
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ.
4) ಕೇಂದ್ರ ಕಛೇರಿಯ ಎಲ್ಲಾ ವಿಭಾಗದ ಮ್ಯಾನೇಜರ್/ಅಧೀಕ್ಷಕರುಗಳಿಗೆ.
5) ಕಛೇರಿ ಪ್ರತಿ.

E:\Bhaskar\DCE 425_Gruop D_single file to Govt..docx